**ಗೌರವಾನ್ವಿತ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಎಂ.ಎ.ಸಿ.ಟಿ. ರವರ ನ್ಯಾಯಾಲಯದಲ್ಲಿ ಹಿರಿಯೂರು**

**ಎಂ.ವಿ.ಸಿ. ನಂ: 503/2024**

| ಅರ್ಜಿದಾರರು | ವಿರುದ್ಧ | ಎದುರುದಾರರು |
| --- | --- | --- |
| ಡಿ. ರಂಗಸ್ವಾಮಿ | | ಎಸ್.ಕುಮಾರ್ ಮತ್ತು ಇನ್ನೊಬ್ಬರು |

ಹೆಸರು : ಡಿ.ರಂಗಸ್ವಾಮಿ,
ತಂದೆಯ ಹೆಸರು : ದುರ್ಗೆಶಪ್ಪ,
ವಯಸ್ಸು : ಸುಮಾರು 48 ವರ್ಷಗಳು
ಉದ್ಯೋಗ : ಕೂಲಿ ಕೆಲಸ
ವಾಸ : ವೇದಾವತಿ ನಗರ,
ಹಿರಿಯೂರು–ಟೌನ್
ಚಿತ್ರದುರ್ಗ– ಜಿಲ್ಲೆ,

PW1
25/6

**ಅರ್ಜಿದಾರರ ಪರ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮೂಲಕ**

ನಾನು, ಡಿ.ರಂಗಸ್ವಮಿ ಬಿನ್ ದುರ್ಗೆಶಪ್ಪ, ವಯಸ್ಸು ಸುಮಾರು48ವರ್ಷ, ಚಿತ್ರದುರ್ಗ–ಜಿಲ್ಲೆ, ಹಿರಿಯೂರು ಟೌನ್, ವೇದಾವತಿ ನಗರದ ವಾಸಿಯಾದ ನಾನು, ದೇವರ ಹೆಸರಿನಲ್ಲಿ ಪ್ರಮಾಣೀಕರಿಸಿ ಹೇಳುವುದೇನೆಂದರೇ,

ಮೇಲ್ಕಂಡ ಪ್ರಕರಣದಲ್ಲಿ ನಾನು ಅರ್ಜಿದಾರನಾಗಿದ್ದು, ಪ್ರಕರಣದ ಎಲ್ಲಾ ಅಂಶಗಳು ನನಗೆ ಖುದ್ದು ತಿಳಿದಿದ್ದು, ನಾನು ಅಪಘಾತದಲ್ಲಿ ಗಾಯ ಗೊಂಡಿರುವುದಕ್ಕೆ ಪರಿಹಾರಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತೇನೆ.

ದಿನಾಂಕ: 24–8–2023ರಂದು ರಾತ್ರಿ 7–45.ಪಿ.ಎಂ. ಗಂಟೆಯ ಸಮಯದಲ್ಲಿ ನಾನು ನನ್ನ ಬಾಬ್ತು ಕೂಲಿ ಕಾರ್ಮಿಕ ಕೆಲಸ ಮುಗಿಸಿಕೊಂಡು ವಾಪಾಸ್ಸು ಮನೆಗೆ ಹೋಗಲು ಹಿರಿಯೂರು ಟೌನ್, ಟಿ.ಬಿ. ಸರ್ಕಲ್ ಕಡೆಯಿಂದ ಚಳ್ಳಕೆರೆ ರಸ್ತೆಯಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ ಇರುವ ಮನೆಗೆ ಹೋಗಲು ಚಳ್ಳಕೆರೆ ರಸ್ತೆ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಅದೇ ಸಮಯದಲ್ಲಿ ಕೆ.ಎ.16–ಬಿ–6836 ಟೆಂಪೋ ಟ್ರ್ಯಾಕ್ಸ್ ವಾಹನದ ಚಾಲಕ ತನ್ನ ವಾಹನವನ್ನು ಹಿರಿಯೂರು ಟೌನ್ ಕಡೆಯಿಂದ ಅತೀವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ನನಗೆ ಹಿಂದಿನಿಂದ

NO OF CORRECTIONS
..........................
SIRESTHDAR

D. Rangaswamy.

ಬಂದು ಡಿಕ್ಕಿ ಪಡಿಸಿದನು ಪರಿಣಾಮವಾಗಿ ನಾನು ಕೆಳಗೆ ಬಿದ್ದು ರಕ್ತ ಗಾಯಗಳಾಗಿ ಚಿಕಿತ್ಸೆಗಾಗಿ ಹಿರಿಯೂರುನ ಸರ್ಕಾರಿ ಆಸ್ಪತ್ರೆಗೆ ದಾಖಲಾದೆನು ಸದರಿ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಪ್ರಥಮ ಚಿಕಿತ್ಸೆನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ಕಳುಹಿಸಿದರು ಅದರಂತೆ ನಾನು ಹೆಚ್ಚಿನ ಚಿಕಿತ್ಸೆಗಾಗಿ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆಗೆ ದಾಖಲಾದೆನು ಸದರಿ ಆಪಘಾತದಲ್ಲಿ ನನಗೆ ತಲೆಗೆ ಹಣೆಗೆ ಎಡಬುಜಕ್ಕೆ ಕುತ್ತಿಗೆ ಎಡತೊಡೆಗೆ ಮಾರ್ಮಂಗದ ಭಾಗಕ್ಕೂ (over the left geon region) ಹಾಗೂ ಸೊಂಟಕ್ಕೆ ಪೆಟ್ಟುಗಳು ಬಿದ್ದು ಜಿಲ್ಲಾ ಆಸ್ಪತ್ರೆಯ ವೈದ್ಯರ ಸಲಹೆ ಮೇರೆಗೆ ಎಕ್ಸ್ ರೇ ಮತ್ತು ಸಿ.ಟಿ.ಸ್ಕ್ಯಾನ್ ತೆಗೆದುನೋಡಿ ಹಣೆಯ ಭಾಗದಲ್ಲಿ 6 ಹೊಲಿಗೆಗಳನ್ನು ಹಾಕಿ ಬ್ಯಾಂಡೇಜ್ ಹಾಕಿದರು ಮತ್ತು ಎಡತೊಡೆಯ ಭಾಗದಲ್ಲಿ ವಿಶೇಷ ಚಿಕಿತ್ಸೆಯನ್ನು ನೀಡಿದರು, ಮತ್ತು ಎಡಭುಜ ಮತ್ತು ಕುತ್ತಿಗೆ ಭಾಗದಲ್ಲಿ ಪ್ಲಾಸ್ಟರ್ ಹಾಕಿದರು ನಂತರ ಸೊಂಟದ ಭಾಗದಲ್ಲಿ ಹೆಚ್ಚಿನ ನೋವು ಇದ್ದುದ್ದರಿಂದ ಸೊಂಟದ ಬೇಲ್ಟ್ ಅಳವಡಿಸಿದರು ನಂತರ ಸದರಿ ಜಿಲ್ಲಾ ಆಸ್ಪತ್ರೆಯಲ್ಲಿ ದಿನಾಂಕ:24-8-2023ರಿಂದ 28-8-2023ರವರೆಗೆ ಒಳರೋಗಿಯಾಗಿ ದಾಖಲಾಗಿ ಚಿಕಿತ್ಸೆ ಪಡೆದಿರುತ್ತೇನೆ ನಂತರ ಸದರಿ ಜಿಲ್ಲಾ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ವೈದ್ಯರ ಸಲಹೆ ಮೇರೆಗೆ ಸುಮಾರು 6 ತಿಂಗಳು ಕಾಲ ಹೊರ ರೋಗಿಯಾಗಿ ಹಿರಿಯೂರಿನ ಸರ್ಕಾರಿ ಆಸ್ಪತ್ರೆ ಚಿತ್ರದುರ್ಗ ಜಿಲ್ಲಾ ಆಸ್ಪತ್ರೆ ಹಿರಿಯೂರಿನ ಶ್ರೀ ನರ್ಸಿಂಗ್ ಹೋಂ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಚಿಕಿತ್ಸೆಗಾಗಿ ನನಗೆ ಸುಮಾರು 25,000/-ರೂಗಳು ಖರ್ಚಾಗಿರುತ್ತದೆ.

ಅಫಘಾತದ ಪೂರ್ವದಲ್ಲಿ ನಾನು ಆರೋಗ್ಯವಂತ ದೃಡಕಾಯದವನಾಗಿದ್ದು, ಕೂಲಿ ಕಾರ್ಮಿಕನಾಗಿ ಕೆಲಸ ಮಾಡಿಕೊಂಡಿದ್ದು, ತಿಂಗಳಿಗೆ ಸುಮಾರು ರೂ.30,000/-ರಷ್ಟು ದುಡಿಯುತ್ತಿದ್ದೆನು ಅಪಘಾತದ ನಂತರ ನನಗೆ ಅಪಘಾತದಲ್ಲಿ ಉಂಟಾದ ಗಾಯಗಳಿಂದಾಗಿ ಸುಮಾರು 6 ತಿಂಗಳು ಕಾಲ ಯಾವುದೇ ಕೆಲಸ ಕಾರ್ಯ ಮಾಡದೇ ಆಗದೇ ನನಗೆ ನನ್ನ ಆದಾಯದ ಲುಕ್ಸಾನು ಉಂಟಾಗಿರುತ್ತದೆ ನನಗೆ ಈಗಲೂ ಸೊಂಟದ ಭಾಗದಲ್ಲಿ ಮತ್ತು ಎಡ ತೊಡೆಯ ಭಾಗದಲ್ಲಿ ಆಗಾಗ್ಗೆ ನೋವು ಉಂಟಾಗುತ್ತಿದ್ದು, ಕಷ್ಟಕರ ಕೆಲಸ ಮಾಡಲು ಸಾದ್ಯವಾಗುತ್ತಿಲ್ಲ ಸದರಿ ಅಪಘಾತದಿಂದ ಮತ್ತು ಅಪಘಾತದಿಂದ ಉಂಟಾದ ಗಾಯಗಳಿಂದ ನನಗೆ ಮಾನಸಿಕವಾಗಿ ದೈಹಿಕವಾಗಿ ಮತ್ತು ಆರ್ಥಿಕವಾಗಿ ತುಂಬಲಾರದ ನೋವು ಮತ್ತು ನಷ್ಟ ಉಂಟಾಗಿರುತ್ತದೆ.

D. Rangaswamy

NO. OF CORRECTIONS Nil
..........................
SIRESTHDAR

ಸದರಿ ಅಪಘಾತಕ್ಕೆ ಸಂಭಂಧಪಟ್ಟಂತೆ ಎಲ್ಲಾ ದಾಖಲೆಗಳನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಅವುಗಳನ್ನು ನನ್ನ ಪರ ನಿಶಾನೆಗಳನ್ನಾಗಿ ಗುರುತಿಸಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಸದರಿ ಅಪಘಾತವು ಕೆ.ಎ.–16–6836ನೇ ಟೆಂಪೋಟ್ರ್ಯಾಕ್ಸ್ ವಾಹನದ ಚಾಲಕನ ನಿರ್ಲಕ್ಷತೆಯಿಂದ ಉಂಟಾಗಿದ್ದು, 1ನೇ ಎದುರುದಾರರು ಸದರಿ ವಾಹನದ ಆರ್.ಸಿ. ಮಾಲೀಕರಾಗಿದ್ದು ಮತ್ತು 2ನೇ ಎದುರುದಾರರು ಸದರಿ ವಾಹನದ ವಿಮೆದಾರರಾಗಿದ್ದು, 1ನೇ ಮತ್ತು 2ನೇ ಎದುರುದಾರರುಗಳಿಂದ ನನಗೆ ಅರ್ಜಿಯಲ್ಲಿ ಕೋರಿರುವಂತೆ ಪರಿಹಾರ ಕೊಡಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮೇಲ್ಕಂಡ ಈ ಪ್ರಮಾಣಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವೆಂತಲೂ ಇದರಡಿ ಮಾಡಿರುವ ರುಜು ನನ್ನದೆಂತಲೂ ದೇವರ ಹೆಸರಿನಲ್ಲಿ ಪ್ರಮಾಣೀಕರಿಸುತ್ತೇನೆ.

ನನ್ನಿಂದ ಗುರುತಿಸಲ್ಪಟ್ಟಿದ್ದಾರೆ

Y. Rahm (YRK)

ವಕೀಲರು

S. Rangaswamy

ಪ್ರಮಾಣಕರ್ತ.

ಹಿರಿಯೂರು

ದಿನಾಂಕ: 25-6-2026.

"SWORN TO BRFORE ME"

25/6/2020

CHIEF MINISTERIAL OFFICER

... JUDGE AND

J.M.F.C. COURT, HIRIYUR

NO OF CORRECTIONS 1

SIRESTHDAR

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಿರಿಯೂರು ಇವರ ನ್ಯಾಯಾಲಯದಲ್ಲಿ

**MVC** 503/2024

ಪಿ ಡಬ್ಲು - 1

| | | |
|---|---|---|
| ಸಾಕ್ಷಿಯ ಹೆಸರು | : | ಡಿ. ರಂಗಸ್ವಾಮಿ |
| ತಂದೆ ಹೆಸರು | : | ದುರ್ಗೇಶಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ | : | ವೇದಾವತಿ ನಗರ ಹಿರಿಯೂರು |

ಸಾಕ್ಷಿಯನ್ನು ದಿಃ 25-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಅರ್ಜಿದಾರರ ಪರ ಶ್ರೀ ವೈ ಆರ್ ಕೆ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿದ್ದೇನೆ.

ಪ್ರಥಮ ವರ್ತಮಾನ ವರದಿ ದೃಢೀಕೃತ ನಕಲನ್ನು ನಿಪಿ- 1

ಹೇಳಿಕೆ ದೂರಿನ ದೃಢೀಕೃತ ನಕಲನ್ನು ನಿಪಿ-2

ಗಾಯದ ಪ್ರಮಾಣ ಪತ್ರ ದೃಢೀಕೃತ ನಕಲನ್ನು ನಿಪಿ-3 ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

D. Rangaswamy.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಹಿರಿಯೂರು